ಇ) ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳಿಗೆ ಆರ್ಥಿಕ ನೆರವು ಪಡೆದ ಮೇಲೆ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಸುಮಾರು ನಾಲ್ಕು ವರ್ಷಗಳ ಕಾಲಾವಕಾಶ ಬೇಕಾಗುವುದು. ತದನಂತರ ಬೈರಮಂಗಲ ಕೆರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹರಿದುಬರುತ್ತಿರುವ ಒಳಚರಂಡಿ ನೀರನ್ನು ತಡೆಗಟ್ಟಬಹುದಾಗಿದೆ.

ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿನ ಅವ್ಯವಹಾರ

1132 (1901) ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಕೈಗೊಳ್ಳಲಾಗಿರುವ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ತನಿಖಾ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ;

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು) ;–

ಅ) ಪ್ರಾಥಮಿಕ ತನಿಖಾ ವರದಿಯನ್ನು ಸಲ್ಲಿಸಲಾಗಿದೆ.

ಆ) ಪ್ರಾಥಮಿಕ ತನಿಖಾ ವರದಿಯನ್ನಾಧರಿಸಿ, ಹಿಂದಿನ ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು, ಇವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಅವರ ವಿವರಣೆ/ಸಮಜಾಯಿಷಿಯನ್ನು ನೀಡಲು ಸೂಚಿಸಲಾಗಿತ್ತು. ಅಧಿಕಾರಿಯವರು ಕಾರಣ ಕೇಳುವ ನೋಟೀಸಿಗೆ ಉತ್ತರಿಸಲು ಅಗತ್ಯವಿರುವ ದಾಖಲೆಗಳ ದೃಢೀಕೃತ ನಕಲುಗಳನ್ನು ಹಾಗೂ 8 ವಾರಗಳ ಕಾಲಾವಕಾಶವನ್ನು ಕೋರಿದ್ದಾರೆ, ಅಧಿಕಾರಿಯವರಿಗೆ ಅಗತ್ಯ ದಾಖಲೆಗಳನ್ನು ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ. ಅಧಿಕಾರಿಯವರ ವಿವರಣೆ/ಸಮಜಾಯಿಷಿ ಸ್ವೀಕೃತವಾದ ಮೇಲೆ ಈ ವಿಷಯದಲ್ಲಿ ಜರುಗಿಸಬಹುದಾದ ಮುಂದಿನ ಕ್ರಮದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಹೀರೋ ಮೋಟಾರ್ಸ್ ಯೋಜನೆ ಸ್ಥಳಾಂತರ

1133 (2069) ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್) :– ಮಾನ್ಯ ಮುಖ್ಯ ಮಂತ್ರಿಗಳು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಧಾರವಾಡ ಬೇಲೂರಿನಿಂದ ಹೀರೋ ಮೋಟಾರ್ಸ್ ಯೋಜನೆಯು ಆಂಧ್ರಕ್ಕೆ ಹೋಗಲು ಕಾರಣಗಳೇನು ;

ಆ) ಈ ಯೋಜನೆಗೆ ಅರ್ಜಿ ಹಾಕಿರುವ ದಿನಾಂಕ, ಕೋರಿರುವ ರಿಯಾಯಿತಿಗಳು ಮತ್ತು ರಾಜ್ಯ ಸರ್ಕಾರದ ನಿರ್ಣಯಗಳಾವುವು; (ಸಂಪೂರ್ಣ ವಿವರ ಒದಗಿಸುವುದು)

ಇ) ಧಾರವಾಡ ಬೇಲೂರಿಗೆ ಪರ್ಯಾಯವಾಗಿ ಬೃಹತ್ ಕೈಗಾರಿಕೆಯನ್ನು ತರಲು ಸರ್ಕಾರದ ಮುಂದಿರುವ ಯೋಜನೆಯೇನು; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು) :–

ಅ) ಕಂಪನಿಯವರು ಕಳುಹಿಸಿದ ಇ–ಮೇಲ್ ಪತ್ರದಲ್ಲಿ ಕರ್ನಾಟಕ ಸರ್ಕಾರ ನೀಡಿರುವ ರಿಯಾಯಿತಿ ಮತ್ತು ಪ್ರೋತ್ಸಾಹಗಳು ತೃಪ್ತಿಕರವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಆ) ಈ ಕಂಪನಿಯು ಯೋಜನೆಯ ಅನುಮೋದನೆಗೆ ಅರ್ಜಿ ಸಲ್ಲಿಸಿದ ದಿನಾಂಕ: 09.12.2013.

ಮೆ॥ ಹೀರೋ ಮೋಟೋ ಕಾರ್ಪ್ ಲಿಮಿಟೆಡ್ ಕಂಪನಿಯ ಉದ್ದೇಶಿತ ರೂ.1450 ಕೋಟಿ ಬಂಡವಾಳದೊಂದಿಗೆ ಮಮ್ಮಿಘಟ್ಟಿ ಕೈಗಾರಿಕಾ ಪ್ರದೇಶ ಧಾರವಾಡದಲ್ಲಿ ಮೋಟಾರ್ ಬೈಕ್ ತಯಾರಿಕಾ ಯೋಜನೆಗೆ ದಿನಾಂಕ: 04.03.2014 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಅನುಮೋದನೆ ನೀಡಿರುತ್ತದೆ. ಅದರಂತೆ ಸರ್ಕಾರಿ ಆದೇಶ ಸಂಖ್ಯೆ: ಸಿಐ 76 ಎಸ್‌ಪಿಐ 2014, ದಿನಾಂಕ: 07.05.2014 ನ್ನು ಹೊರಡಿಸಲಾಗಿದೆ.

ಮೆ॥ ಹೀರೋ ಮೋಟೋ ಕಾರ್ಪ್ ಲಿಮಿಟೆಡ್ ಕಂಪನಿಯವರು ಈ ಕೆಳಕಂಡ ವಿಶೇಷ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

a) ಭೂಮಿ 500 ಎಕರೆ ವಿಸ್ತೀರ್ಣದ ಭೂಮಿಯನ್ನು ಒಂದೇ ಬಾರಿಗೆ ಮಂಜೂರು ಮಾಡುವುದು.

b) OEM ಮತ್ತು SPD ವ್ಯಾಪಾರದ ಮೇಲೆ 0.1% ರಂತೆ CST ಯನ್ನು 5 ವರ್ಷಗಳ ಅವಧಿಗೆ ಅಥವಾ GST ಯಾವುದು ಮೊದಲೋ ಅದನ್ನು ಮಂಜೂರು ಮಾಡುವುದು.

c) ಶೇ. 100 ರಂತೆ GVAT ಯನ್ನು ಬಡ್ಡಿರಹಿತ ಸಾಲವನ್ನಾಗಿ 15 ವರ್ಷಗಳ ಅವಧಿಗೆ ಶೇ. 200 ರ ಬಂಡವಾಳ ಮಿತಿಗೊಳಪಟ್ಟು 11 ವರ್ಷಗಳ ಅವಧಿಗೆ ಮರುಪಾವತಿ ಮಾಡುವುದು.

d) ರಿಯಾಯಿತಿ ಮತ್ತು ಉತ್ತೇಜನಗಳ ಒಟ್ಟು ಮೌಲ್ಯವನ್ನು ಸೀಮಿತಗೊಳಿಸಬಾರದು.

e) ಕಚ್ಚಾಮಾಲಿನ ಮೇಲೆ ರಿಯಾಯಿತಿಯನ್ನು VAT ಮತ್ತು CST ಅನ್ವಯ ಮಾಡುವುದು.

f) ವ್ಯಾಟ್ ಸಾಲವನ್ನು 7 ದಿನಗಳೊಳಗೆ ಮರುಪಾವತಿ ಮಾಡುವುದು.

g) ಮಾರಾಟಗಾರರಿಗೆ 10 ವರ್ಷಗಳ ಅವಧಿಗೆ ಶೇ. 75 ರಷ್ಟು GVAT ಮೃದುಸಾಲ ಮಂಜೂರಾತಿ

h) ಯಂತ್ರೋಪಕರಣಗಳುಗೆ ಮತ್ತು ಸರಕು ಸಾಗಾಣಿಕಗಳ ಮೇಲೆ ಪ್ರವೇಶ ತೆರಿಗೆಯಿಂದ ವಿನಾಯಿತಿ.

i) ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ 10 ವರ್ಷಗಳ ಅವಧಿಗೆ ವಿನಾಯಿತಿ ನೀಡುವುದು.

j) ಭೂದಾಖಲೆಗಳ ನೋಂದಣಿಗೆ ಶೇ. 100 ರಷ್ಟು ನೊಂದಣಿ ಮತ್ತು ಮುದ್ರಾಂಕ ಶುಲ್ಕ ವಿನಾಯಿತಿ.

k) 10 ವರ್ಷಗಳ ಅವಧಿಗೆ ಶೇ. 100 ರಷ್ಟು ವಿದ್ಯುತ್ ಶುಲ್ಕದಿಂದ ರಿಯಾಯಿತಿ.

l) ಶೇ. 70 ರಂತೆ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ಷರತ್ತಿನಿಂದ ವಿನಾಯಿತಿ.

m) ವರ್ಕ್ ಕಾಂಟ್ರಾಕ್ಟ್ ಟ್ಯಾಕ್ಸ್ ರಿಯಾಯಿತಿ.

n) ರಿಯಾಯಿತಿ ದರದಲ್ಲಿ ಭೂಮಿ ಮಂಜೂರಾತಿ

ಕಂಪನಿಯು ಕೋರಿರುವ ರಿಯಾಯಿತಿಗಳು ಮತ್ತು ಸರ್ಕಾರದ ನಿರ್ಣಯಗಳು – ಸರ್ಕಾರಿ ಆದೇಶ ಸಂಖ್ಯೆ: ಸಿಐ 154 ಎಸ್‌ಪಿಐ2011, ದಿನಾಂಕ: 03.09.2014 ನ್ನು ಲಗತ್ತಿಸಿದೆ.

ಮೆ॥ ಹೀರೋ ಮೋಟಾರ್ಸ್ ಘಟಕವು ಮಮ್ಮಿಗಟ್ಟಿ ಕೈಗಾರಿಕಾ ಪ್ರದೇಶ, ಧಾರವಾಡ ಇಲ್ಲಿ ಯೋಜನೆಯ ಅನುಷ್ಠಾನಕ್ಕೆ ವಿವಿಧ ವಿಶೇಷ ಉತ್ತೇಜನಗಳನ್ನು ಕೋರಿದ್ದು. ಈ ಸಂಬಂಧ ಸರ್ಕಾರವು ಈ ಘಟಕಕ್ಕೆ ಕೈಗಾರಿಕಾ ನೀತಿಯಲ್ಲಿನ ರಿಯಾಯಿತಿ ಹಾಗೂ ಪ್ರೋತ್ಸಾಹಗಳಿಗಿಂತ ಹೆಚ್ಚುವರಿಯಾಗಿ ಈ ಕೆಳಕಂಡ ವಿಶೇಷ ಉತ್ತೇಜನಗಳನ್ನು ಮಂಜೂರು ಮಾಡಿ ಆದೇಶ ಸಂಖ್ಯೆ ಸಿಐ 154 ಎಸ್‌ಪಿಐ 2011, ದಿನಾಂಕ: 03.09.2014 ನ್ನು ಹೊರಡಿಸಿದೆ.

1) Interest free loan to an extent of 95% of CST paid during initial 5 years (from the date of commencement of commercial production) or till introduction of GST whichever is earlier, for interestate sales of completely built units

(motorbikes) and spare parts The loan to be repaid in five years from 11th year onwards.

2) 70% of Eligible Gross VAT (SGST during GST regime) as interest free loan during initial 12 years (from the date of commencement of commercial production) on quarterly basis on the sale of completely built units (motorbikes) and spare parts manufactured in the proposed plant. Repayment will start from 11th years on quarterly basis.

3) 100% Entry tax exemption for 5 years during implementation on plant and machinery and capital goods including equipments required for captive power generation and IT equipments

4) 100% Entry tax exemption on input components and raw materials for 10 years from the date of commencement of commercial production.

5) 100% Exemption on stamp duty for registration of land and loan documents.

6) 100% Exemption on electricity duty/tax for initial 5 years (from the date of commencement of commercial production) on power purchased from HESCOM.

7) Reimbursement of work contract tax for initial 3 years from the date of commercement of construction.

ಇ) ಹೊಸ ಕೈಗಾರಿಕಾ ನೀತಿಯನ್ವಯ ಧಾರವಾಡ ಹಾಗೂ ಇತರೆ ಪ್ರದೇಶಗಳಿಗೆ ಬೃಹತ್ ಕೈಗಾರಿಕೆಗಳನ್ನು ತರಲು ಹೆಚ್ಚಿನ ಒತ್ತನ್ನು ನೀಡಿದ್ದು. ಈ ಪ್ರದೇಶಗಳಲ್ಲಿ ಬೃಹತ್ ಕೈಗಾರಿಕೆಗಳು ಬರುವುದನ್ನು ನಿರೀಕ್ಷಿಸಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಉದ್ದೇಶಿಸಿದ್ದು, ಈ ಭಾಗದ ಧಾರವಾಡ ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲು ಹೊಸ ಕೈಗಾರಿಕಾ ನೀತಿ 2014–19ರಲ್ಲಿ ಪ್ರಸ್ತಾಪಿಸಿದೆ.

• ಧಾರವಾಡ ಕೊಪ್ಪಳ ರಾಯಚೂರು ಮುಖಾಂತರ ರಾಜ್ಯ ಕೈಗಾರಿಕಾ ಕಾರಿಡಾರ್ ಸ್ಥಾಪನೆಗೆ.

• ಬಂಡವಾಳ ವಲಯ/(ಎಸ್.ಐ.ಆರ್) ಪ್ರಕಟಿಸಲಾಗಿದೆ – ಅದರಂತೆ, ಬೆಂಗಳೂರಿನಲ್ಲಿ ನಟ್ಟತೆಯನ್ನು ಕಡಿಮೆ ಮಾಡಿ ಕೈಗಾರಿಕಾಭಿವೃದ್ಧಿಯ ಮೂಲಕ ಇತರ ಪ್ರದೇಶಗಳನ್ನು ಬೆಳೆಸಲು ಅವಕಾಶವುಳ್ಳ ಪ್ರದೇಶಗಳನ್ನು ವಿಶೇಷ ಬಂಡವಾಳ ವಲಯಗಳೆಂದು (ಎಸ್ಐಆರ್‌ಗಳು) ಪ್ರಕಟಿಸಿ ಗಣನೀಯವಾಗಿ ಮೂಲ ಸೌಕರ್ಯಗಳನ್ನು ನಿರ್ಮಿಸಲು ಬೆಂಬಲವನ್ನು ಒದಗಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ ಧಾರವಾಡ, ಬೆಳಗಾವಿ, ಹಾವೇರಿ, ಗದಗ ಜಿಲ್ಲೆಗಳಿಗೆ ಅನ್ವಯಿಸುವಂತೆ ಈ ರೀತಿಯ ಒಂದು ಎಸ್ಐಆರ್ ವಲಯವನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ.

ಕೈಗಾರಿಕಾ ನೀತಿ 2014–19ರನ್ವಯ ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಘಟಕಗಳಿಗೆ ಈ ಕೆಳಕಂಡ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳನ್ನು ಘೋಷಿಸಿದೆ.

ಎ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

ಬಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ

ಸಿ) ಭೂಪರಿವರ್ತನೆ ಶುಲ್ಕದ ಮರುಪಾವತಿ

ಡಿ) ಪ್ರವೇಶ ತೆರಿಗೆಯಿಂದ ವಿನಾಯಿತಿ

ಇ) ಇಟಿಪಿಗಳನ್ನು ಸ್ಥಾಪಿಸಲು ಸಹಾಯಧನ

ಎಫ್) ಆಂಕರ್ ಘಟಕ ಸಹಾಯಧನ

ಜಿ) ಬೃಹತ್ ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಕೈಗಾರಿಕೆಗಳ ನಿವ್ವಳ ವ್ಯಾಟ್ ಸಾಲ ಮತ್ತು ಸಿಎಸ್‌ಟಿಯ ಮರುಪಾವತಿ.

ಕೈಗಾರಿಕಾ ಇಲಾಖೆಯಡಿಯಲ್ಲಿ ಜಿಮ್ ನಡೆಸುವುದು

1134 (2070) ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್) :– ಮಾನ್ಯ ಮುಖ್ಯಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ :–

ಅ) ಕೈಗಾರಿಕಾ ಇಲಾಖೆಯಡಿಯಲ್ಲಿ ಜಿಮ್ ನಡೆಸುವ ಉದ್ದೇಶವಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಹಿಂದಿನ 'ಜಿಮ್' ಗಳನ್ನು ಸುಧಾರಣೆ ಮಾಡಲು ಹೊಸ ಯೋಜನೆಗಳನ್ನೇನಾದರೂ ಸರ್ಕಾರ ಅಳವಡಿಸಿದೆಯೇ?